ದಿಃ 14-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ-**

ನಾನು ಒಂಬತ್ತನೇ-ಹತ್ತನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಶಾಲೆ ಕಲಿತಿರುತ್ತೇನೆ. ದಾವಾ ಆಸ್ತಿಯು ಒಂದು ದಾರಿ ಇರುತ್ತದೆ. ಸದರಿ ದಾರಿಯಲ್ಲಿ ನನ್ನನ್ನು ಹಿಡಿದು ಸಾಕಷ್ಟು ಜನರು ಬಳಸುತ್ತಾರೆ ಸಾಕ್ಷಿದಾರರು ಮುಂದುವರೆದು ಬಂಕಟಲಾಲ ವ್ಯಾಸ ಎಂಬುವ ಪಂಗಡದವರು ಸಹ ಬಳಸುತ್ತಿದ್ದರು ಎಂದು ಉತ್ತರಿಸುತ್ತಾರೆ.

ಈ ದಾರಿಯು ಸುಮಾರು 8 ಫೀಟಿನ ಅಗಲ ಹೊಂದಿರುತ್ತದೆ. ನಾನು ಈ ದಾರಿಯನ್ನು ತೋರಿಸಲು ನ್ಯಾಯಾಲಯಕ್ಕೆ ಪೆನ ಡ್ರೈವನ್ನು ಹಾಜರುಪಡಿಸಿರುತ್ತೇನೆ. ನಾನು ಈ ದಾವೆಯನ್ನು ಪ್ರತಿವಾದಿ ವಿರುದ್ಧ ಸದರಿ ದಾರಿಯನ್ನು ತೆಗೆಯಲು ಕೇಳಿದ್ದು ಇರುತ್ತದೆ. ಈ ಸದರಿ ದಾರಿಯ ಮೂಲಕ ನಮಗೆ ಸಂಬಂಧಪಟ್ಟ ದನಕರುಗಳು ಓಡಾಡಲು ಹಾಗೂ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುವ ಕಾರಣ ಈ ವಿಚಾರವಾಗಿ ನಮ್ಮನ್ನು ಪ್ರಶ್ನಿಸಿದಲ್ಲಿ ನಾವು ಅವರಿಗೆ ಪ್ರತಿವಾದಿಯು ಈ ದಾರಿಯನ್ನು ಬಂದ ಮಾಡಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ.

ಈ ದಾವೆ ಹೂಡುವ ಪೂರ್ವದಲ್ಲಿ ನಾನು ಲಿಖಿತ ರೂಪದ ನೋಟಿಸನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ನೋಟೀಸನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಾವೆ ಹೂಡಿದ ಸಮಯದಲ್ಲಿ ನಾವು ನೋಟೀಸನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ. ನಾನು ಯಾವುದೇ ಲಿಖಿತ ರೂಪದಲ್ಲಿ ನೋಟೀಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವೆ ಸ್ವತ್ತಿಗೆ ಸಂಬಂಧಿಸಿದ ಚೆಕಬಂದಿಯನ್ನು ನಾನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿರುತ್ತೇನೆ. ಪ್ರತಿವಾದಿಗೆ ಸಂಬಂಧಪಟ್ಟ ಮನೆಯು ತಲೆತಲಾಂತರದಿಂದ ಅವರ ಪೂರ್ವಿಕರಿಂದ ಬಂದ ಮನೆಯಾಗಿರುತ್ತದೆ ಎಂದರೆ ಸರಿ. ಸದರಿ ಮನೆಯು ಪುರಕಲ ಕಲ್ಲಿನ ಮನೆಯಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗೆ ಸೇರಿರುವ ಮನೆಯು ಸುಮಾರು 70-80 ವರ್ಷ ಹಳೆಯ ಮನೆಯಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗೆ ಸೇರಿರುವ ಮನೆಯ ತೊಲೆಯು ಹುಳಗಳು ತಿಂದು ಹಾಳಾಗಿರುತ್ತವೆ ಎಂದರೆ ಸಾಕ್ಷಿದಾರರು ಆಗಿರಬಹುದು ಎಂದು ಉತ್ತರಿಸುತ್ತಾರೆ.

ಸದರಿ ಕಟ್ಟಿಗೆ ತೊಲೆಗಳು ಹಾಲಾಗಿರುವ ಕಾರಣ ಪ್ರತಿವಾದಿಯು

ಅವುಗಳನ್ನು ತೆಗೆದು ಪುನ: ತನ್ನ ಮನೆಯನ್ನು ನವೀಕರಣಗೊಳಿಸುತ್ತಿದ್ದನು ಎಂದರೆ ಸರಿಯಲ್ಲ. ಕಟ್ಟಡ ನಿರ್ಮಾಣವನ್ನು ಸ್ಥಗಿತಗೊಳಿಸುವ ಉದ್ದೇಶದಿಂದ ನಾನು ಪ್ರತಿವಾದಿ ವಿರುದ್ದ ಒಂದು ಖೊಟ್ಟಿ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯು ರಸ್ತೆಗೆ ಅಡೆತಡೆ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಪ್ರತಿವಾದಿಯ ವಿರುದ್ದ ಮಾಡಿರುವ ಆಪಾದನೆಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಪ್ರ.ಪತ್ರದಲ್ಲಿ ಕೂಡಿರುವ ಸಂಗತಿಗಳು ಸುಳ್ಳು ಹಾಗೂ ಮಜಗೂರಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಕಿರುಕುಳ ಕೊಡುವ ಉದ್ದೇಶದಿಂದ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವೆಗೂ ಹಾಗೂ ಪ್ರತಿವಾದಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧೀಕಾರಿಗಳು, ಶಹಾಬಾದ